# ಆ್ಯಂಗ್ಲೋ ಉರ್ದು ಬಾಲಕರ ಪ್ರೌಢ ಶಾಲೆ ಗದಗ

## ಮಾದರಿ ಪ್ರಶ್ನೆ ಪತ್ರಿಕೆ – 01

ವರ್ಗ :10ನೇ ತರಗತಿ **2018–19** ವಿಷಯ: ದ್ವಿತೀಯ ಭಾಷೆ ಕನ್ನಡ

ಸಮಯ :02:30 ನಿಮಿಷ ಗರಿಷ್ಠ ಅಂಕಗಳು:80

---

**ಪ್ರಶ್ನೆ ಪತ್ರಿಕೆಯು 'ಎ', 'ಬಿ' ಮತ್ತು 'ಸಿ' ಎಂಬ 3 ಬಾಗ ಒಳಗೊಂಡಿದೆ.**

- ಭಾಗ– 'ಎ' ಪಠ್ಯಗಳ ಅಧ್ಯಯನ (ಗದ್ಯ, ಪದ್ಯ, ಪೋಷಕ ಅಧ್ಯಯನ)53
- ಭಾಗ– 'ಬಿ' ಅನ್ವಯಿಕ ವ್ಯಾಕರಣ – 12 ಅಂಕಗಳು
- ಭಾಗ– 'ಸಿ' ವಾಕ್ಯ ರಚನೆ ಹಾಗೂ ಬರವಣಿಗೆ ಕೌಶಲ್ಯ – 15 ಅಂಕಗಳು

### ಭಾಗ–'ಎ'

**1. ಕೆಳಗಿನ ಪ್ರಶ್ನೆಗಳಿಗೆ ಒಂದೋಂದು ವ್ಯಾಕ್ಯಗಳಲ್ಲಿ ಉತ್ತರಿಸಿ** **8X1=08**

1. ಗಿಳಿಯ ಯಾವ ಗುಣವನ್ನು ಇಂದ್ರನು ಮೆಚ್ಚಿಕೊಂಡನು?

ಉ: ತತ್ತ್ವನಿಷ್ಠೆಯನ್ನು ಗುಣವನ್ನು ಇಂದ್ರನು ಮೆಚ್ಚಿಕೊಂಡನು.

2. ಈ ನಾಡಿನ ಬೆನ್ನೆಲುಬು ಯಾರು?

ಉ : ಕೃಷಿಕ ಈ ನಾಡಿನ ಬೆನ್ನೆಲುಬು.

3. ಪುಟ್ಟರಾಜರ ತಂದೆ ತಾಯಿಗಳ ಹೆಸರೇನು?

ಉ: ತಂದೆ ರೇವಯ್ಯ, ತಾಯಿ ಸಿದ್ಧಮ್ಮ

4. ಸಸ್ತನಿ ಆಸ್ರಯದಾಣಗಳು ಯಾವುವು?

ಉ: ಗುಹೆ, ಪೊಟರೆ, ಗೂಡು, ಬಿಲದಂಥ ಜಾಗಗಳು.

5. ವಿದ್ಯಾರ್ಥಿಗಳು ಕಾಫೀ ಕುಡಿಯಲು ಎಂತಹ ಕಪ್ಪುಗಳನ್ನು ಆರಿಸಿಕೊಂಡರು?

ಉ: ಬೆಲೆಬಾಳುವ ಕಪ್ಪುಗಳನ್ನು ಆರಿಸಿಕೊಂಡರು.

6. ಏಣಿಗೆ ಬೀಳುವ ಭಯವಿಲ್ಲ ಏಕೆ?

ಉ: ಆನೆ ಭಾರ ಹೊತ್ತು ಗಟ್ಟಿ ನೆಲೆದ ಮೇಲೆ ಕಾಲೂರಿದರಿಂದ ಬೀಳುವ ಭಯ ವಿಲ್ಲ.

7. ಯುಗಾದಿಯಲ್ಲಿ ಯಾವ ತಿನಿಸನ್ನು ಹಂಚುವ ಸಂಪ್ರದಾಯವಿದೆ?

ಉ: ಬೇವು ಬೆಲ್ಲ

8. ಉತ್ತರನು ನಿಟ್ಟೋಟದಲ್ಲಿ ಓಡಿದ್ದು ಏಕೆ?

ಉ: ವಿಸ್ತಾರವಾದ ಸಮುದ್ರದಂತೆ ಕಾಣುವ ಸೈನ್ಯವನ್ನು ಕಂಡು ಯುದ್ಧ ಮಾಡಲು ಹೆದರಿ ಓಡಿದನು,

**2. ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **11X2=22**

9. **ಮರವನ್ನು ಬಿಟ್ಟು ಹೊಗದೆ ಇರಲು ಗಿಳಿಯು ನೀಡಿದ ಸಮರ್ಥನೆ ಏನು?**

ತನಗೆ ಆಶ್ರಯ ಕೊಟ್ಟಿರುವುದಲ್ಲದೆ ಹಣ್ಣು ಕೊಟ್ಟಿದೆ, ಹಸಿರುಬಣ್ಣದಿಂದ ಮನಸ್ಸಿಗೆ ಮುದ ನೀಡಿದೆ, ನೇರಳುನೀಡಿದೆ, ದುರದೃಷ್ಟದಿಂದ ಮರವನ್ನು ಈಗ ರೋಗ, ಬಡತನಗಳು ಕಿತ್ತು ತಿನ್ನುತ್ತಿವೆ. ಇಂತಹ ಸ್ಥಿತಿಯಲ್ಲಿ ಮರವನ್ನು ಕೈಬಿಟ್ಟು ಬೇರೆ ಕಡೆ ಹೋಗಿ ಮರಕ್ಕೆ ಕೃತಘ್ನನಾಗಲು ತನಗೆ ಇಷ್ಟವಿಲ್ಲವೆಂದು ಹೇಳಿತು.

10. **ಹಕ್ಕಿಗಳು ಗೂಡುಗಳನ್ನು ಯಾವ ರೀತಿಯಲ್ಲಿ ಅಲಂಕರಿಸುತ್ತದೆ?**

ವರ್ಣಮಯ ಹೂದಳವನ್ನು ಅಥವಾ ಹೊಳೆವ ಕಲ್ಲುಗಳನ್ನು ಹಕ್ಕಿ ತಂದು ಹೊರಮೈಗೆ ಅಂಟಿಸುತ್ತವೆ. ಕೆಲವು ಹದ್ದುಗಳಂತೂ ಬಣ್ಣದ ಗಾಜಿನ ಚುರು, ಬಟ್ಟೆಯ ಚಿಂದಿ ಮುಂತಾದವುಗಳನ್ನು ಗೂಡಿಗೆ ತಂದು ಅಲಂಕರಿಸುತ್ತವೆ.

11. **ಹಿರಿಯ ವಿದ್ಯಾರ್ಥಿಳು ಹೆಡ್ ಮಾಸ್ತರರ ಬಳಿ ಯಾವ ವಿಚಾರಗಳನ್ನು ಹೇಳಿಕೊಳ್ಳುತ್ತಿದ್ದರು?**
ತಮ್ಮ ತಮ್ಮ ಜೀವನದ ಬಗ್ಗೆ ಹೇಳಿಕೊಳ್ಳುತ್ತಿದ್ದರು. ಒಂದಲ್ಲ ಒಂದು ತಕರಾರು, ಎಲ್ಲ ಕಡೆ ವ್ಯಾಪಾರ ಕಡಿಮೇಯಾಗುತ್ತದೆ. ರೂಪಾಯಿ ಬೆಲೆ ಕುಸಿಯುತ್ತದೆ. ಹಣಕ್ಕೇ ಬೆಲೆಯೇ ಇಲ್ಲ, ಮಕ್ಕಳು ಬೆಳೆಯುತ್ತಿದ್ದಾರೆ ಅವರನ್ನು ಅರ್ಥಮಾಡಿಕಳ್ಳುವುದೇ ಕಷ್ಟ. ಈ ರೀತಿಯಾಗಿ ತೊಂದರೆಗಳ ಸರಮಾಲೆ ಬೆಲೆಯುತ್ತಿದೆ ಎಂದು ವಿದ್ಯಾರ್ಥಿಗಳು ಹೇಳಿದರು.
12. ಲಂಡನ್‌ನಲ್ಲಿ  ಸಂಭವಿಸಿದ ದುರಂತಗಳ ಬಗ್ಗೆ ಗೈಡ್ ತಿಳಿಸಿದ ವಿಚಾರಗಳೇನು?
1666ರಲ್ಲಿ ಲಂಡನ್ ನಲ್ಲಿ ದೊಡ್ಡ ಅಗ್ನಿ ದುರಂತ ಸಂಭವಿಸಿ 3 ದಿನ ಲಂಡನ್ ಹೊತ್ತಿ ಉರಿಯಿತಂತೆ 1300 ಮನೆಗಳು, 80 ಚರ್ಚಗಳು ಸುಟ್ಟು ಹೊಗಿದ್ದವು. ಈ ದುರಂತದ ನೆನಪಿಗಾಗಿ 200 ಅಡಿ ಎತ್ತರದ ಸ್ತಂಭ ನಿಲ್ಲಿಸಿದ್ದಾರಂತೆ. ಅದಕ್ಕಿಂತ ಒಂದೆರೆಡು ವರ್ಷದ ಹಿಂದೆ ಒಂದೇ ಪ್ಲೇಗ್ ಗೆ ಲಂಡನ್ ನಲ್ಲಿ ಹನ್ನೆರಡು ಹದಿಮೂರು ಸಾವಿರ ಜನರು ಸತ್ತು ಹೋದರಂತೆ ಎಂದು  ತಿಳಿಸಿದರು.
13. ಲಂಡನ್ ಟವರ್ ಬ್ರಿಜ್‌ನ ವೈಶಿಷ್ಟ್ಯವೇನು?
13 ಬ್ರೀಜ್‌ಗಳಿವೆ ಅದರಲ್ಲಿ ಟವರ್ ಬ್ರೀಜ್ ಪ್ರಮುಖವಾದದ್ದು. ಇದು ಸಾವಿರ ಟನ್ ತೂಗುತ್ತದೆ. ಹಡಗುಗಳು ಬಂದಾಗ ಒಂದುವರೆ ಎರಡು ನೀಮಿಷದಲ್ಲಿ ಮೇಲಕ್ಕೆದ್ದು ಹಡುಗುಗಳು ಹೋಗಲು ದಾರಿಮಾಡಿಕೊಡುತ್ತದೆ.
14. **ಏಣಿ ತಾನು ಎಂಥವರಿಗೆ ಯಾವ ರೀತಿ ಸ್ಪಂದಿಸುತ್ತೇನೆಂದು ಹೇಳುತ್ತದೆ?**
ಜನಸಾಮಾನ್ಯರಲ್ಲಿ ವಿನಯ ವಿಧೇಯ ಇರುತ್ತದೆಯೋ ಅಂಥಹ ಜನಸಾಮಾನ್ಯರ ನಮ್ರತೆಗೆ ಕರಗಿ ಅವರನ್ನು ಕೆಳಗೆ ಬೀಳದಂತೆ ಎತ್ತಿ ಹಿಡಿಯುತ್ತೇನೆಂದು ಹೇಳುತ್ತದೆ.
15. ಯುಗದ ಆದಿ ತಂದ ಸಂಭ್ರಮವೇನು?
ಪ್ರಕೃತಿಯು ನವವಧುವು ಶೃಂಗಾರಗೊಂಡಂತೆ ಕಾಣುತ್ತದೆ. ಇದರಿಂದಾಗಿ ಜಗತ್ತೆಲ್ಲಾ ಹೊಸ ಕಳೆಯಿಂದ ಕಂಗೊಳಿಸುವದು ಎಲ್ಲೆಲ್ಲೂ ಚಿಗುರೊಡೆದ ಎಲೆಗಳಿಂದ ಬಣ್ಣ ಬಣ್ಣದ ಫಲಪುಷ್ಪಗಳಿಂದ ಕಂಪನ್ನು ಸೂಸುವ ಮರಗಳನ್ನು ಕಾಣಬಹುದು.
16. ಕೂಗಾಟದ ಬದುಕು ನಿಷ್ಪಯೋಜಕ ಎಂಬುದಕ್ಕೆ ಕವಿ ನೀಡುವ ನಿದರ್ಶನಗಳಾವುವು?
ಕೂಗಾಡಿ ಹಾರಾಡಿ ಮಾಡುವುದರಿಂದ ಫಲವಿಲ್ಲ. ಇದರಿಂದ ರಂಪ ರಾದ್ಧಾಂತ ಆಗುವುದೇ ಹೊರತು ಪ್ರಯೋಜನವಿಲ್ಲ. ಉದಾ: ಹಸಿ ಸೌದೆ ಬುಸುಗುಟ್ಟು ಹೊಗೆ ಎಬ್ಬಿಸಿದಂತೆ ಸಿಡಿಮದ್ದಿಗೆ ಒಂದೇ ಒಂದು ಕಿಡಿ ಸೋಕಿದ ತಕ್ಷಣ ಅದು ಶಬ್ದ ಮಾಡಿ ಸಿಡಿದೆಳೆಸುವಂತೆ ಇದರಿಂದ ನಷ್ಟವೇ ಹೊರತು ಲಾಭವಿಲ್ಲವೆಂದು ಹೇಳಿದ್ದಾರೆ.
17. ಕುಣಿಗಲ್ ಕೆರೆ ಎಂಥವರನ್ನು ಬೆರಗುಗೊಳಿಸುವಂತಿತ್ತು ಏಕೆ?
ಮೂಡಲ ದಿಕ್ಕಿನಲ್ಲಿರುವ ಕುಣಿಗಲ್ ಕೆರೆ ನೋಡುವವರಿಗೆ ಒಂದು ವೈಭೋಗ ಅದೃಷ್ಟ ಮಾಡಿರುವ ನಾವು ಕುಣಿಗಲ್ ಕೆರೆಗೆ ಚಂದಿರನು ಮೂಡಿಬರುತ್ತಾನೆ, ಎಷ್ಟು ಸೌಂದರ್ಯದಿಂದ ಕೂಡಿರುತ್ತದೆ ಎಂದರೆ ಅಬ್ಬಾ ಎಂದು ಆಶ್ಚರ್ಯಗೋಳಿಸುತ್ತದೆ.
18. ಭೀಮನಾಯಕನು ವೈದ್ಯರಿಗೆ ಏನೆಂದು ಕೃತಜ್ಞತೆಗಳನ್ನು ಸಲ್ಲಿಸಿದನು?
ವೈದ್ಯರ ಕಾಲ ಮೇಲೆ ಬಿದ್ದು ಹೇಳಿದ 'ಆ ಕಾಣದ ದೇವರು    ಇದ್ದಾನೋ ಇಲ್ಲವೋ! ನೀವು ಮಾತ್ರ ನನ್ನ ಕಣ್ಣಿಗೆ ಕಾಣುವ ದೇವರು ನಿಮ್ಮ ಉಪಕಾರವನ್ನು ಎಂದೂ ಮರೆಯಲಾರೆ!" ಎಂದು ಕೃತಜ್ಞತೆಯನ್ನು ಸಲ್ಲಿಸಿದನು.
19. ನಾಗರಿಕಥೆಯ ಬೇಳವಣಿಗೆಯ ಬಗ್ಗೆ ಕವಿಯಿತ್ರಿಗೆ ಯಾವ ಅಳಕು ಇದೆ?

ಜನರು ನಗರವನ್ನು ಎಲ್ಲಾ ತಿಂದು ತೇಗಿದ್ದು ಬಗೆಬಗೆಯ ಕಾರೇನು, ಪಟಪಟ ಮೋಟಾರುಗಲೆನು ಅಲ್ಲಿ ಮೇಲೆ ಲೋಹದ ಹಕ್ಕಿ ಹಾರಾಟವೇನು  ಈ ಎಲ್ಲಾ ಜೀವದ ಇಂಧನ ತೀರುತ್ತಲಿದೆ ಬದುಕು ನಾಳೆ ಏನೋ ಯಾಕೋ ಏನೋ ಎಂದು ಕವಯಿತ್ರಿಗೆ ಅಳುಕು ಇದೆ.

## 3. ಈ ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. 1X3=03

20. ನೀರು ಕಂಡಲ್ಲಿ . . . . . . . . . . . . . . . .
. . . . . . . . . . . . . . . . . . . . . . . . . .
. . . . . . . . . . . . . . . . . . . . . . . . . .
. . . . . . . . . . . . . . . .ಕೂಡಲಸಂಗಮದೇವ

ಅಥವಾ

ಮರವಿದ್ದು . . . . . . . . . . . . . . . . . . . .
. . . . . . . . . . . . . . . . . . . . . . . . . .
. . . . . . . . . . . . . . . . . . . . . . . . . .
. . . . . . .ಜ್ಞಾನವಿಲ್ಲದನ್ನಕ್ಕ ಚೆನ್ನಮಲ್ಲಿಕಾರ್ಜುನ

## 4. ಈ ಕೆಳಗಿನ ಕವಿಗಳ/ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ಬರೆಯಿರಿ. 2X3=06

21. ರಮೇಶಗೌಡ ಎಂ.ಕೆ.:

ರಮೇಶಗೌಡ ಮಲ್ಲನಗೌಡ ಕಲ್ಲನಗೌಡ ಧಾರವಾಡ ಜಿಲ್ಲೆಯ ನರಗುಂದ ತಾಲೂಕು, ಕಿತ್ತೂರು ಗ್ರಾಮದಲ್ಲಿ 1975 ರಲ್ಲಿ ಜನಿಸಿದರು. ಪ್ರಸ್ತುತ ಸರ್ಕಾರಿ ಕಾಲೇಜಿನಲ್ಲಿ ಅಧ್ಯಾಪಕರಾಗಿದ್ದಾರೆ ಇವರ 'ಅಮೃತಕ್ಕೆ ಹಾರಿದ ಗರುಡ', 'ರೂಪ ಬಯಲು  ಗಾನಯೋಗಿ ಡಾ॥ ಪಂ. ಪುಟ್ಟರಾಜ ಕವಿ ಗವಾಯಿಗಳು ಎಂಬ ಕೃತಿಯನ್ನು ಹಾಗೂ ಹಲವು ಲೇಖನಗಳನ್ನು ಬರೆದಿದ್ದಾರೆ.

22. ಬಸವರಾಜ ಸಬರದ:

ಡಾ॥ ಬಸವರಾಜ ಸಬರದ ಅವರು ದಿನಾಂಕ 1954 ರಲ್ಲಿ ಕೊಪ್ಪಳ ಜಿಲ್ಲೆಯ ಕುಕನೂರನಲ್ಲಿ ಜನಿಸಿದರು. ಇವರು ಬಸವೇಶ್ವರ ಮತ್ತು ಪುರಂದರದಾಸರು' ಒಂದು ಸಾಂಸ್ಕೃತಿಕ ಅಧ್ಯಯನ ಎನ್ನುವ ಪ್ರೌಢ ಪ್ರಬಂಧಕ್ಕೆ ಪಿ ಹೆಚ್ ಡಿ ಪದವಿ ಪಡೆದಿದ್ದಾರೆ. 'ನನ್ನವರ ಹಾಡು', 'ಹೋರಾಟ', 'ಮೂಡಲದ ಕೆಂಪು ಮೂಡ್ಯಾವ', ಪ್ರಮೂಕ ಕೃತಿಗಳಾಗಿವೆ. ಕರ್ನಾಟಕ ನಾಟಕ ಅಕಾಡಮಿ ಪ್ರಶಸ್ತಿ ಇತ್ಯಾದಿಗಳು ಲಭಿಸಿವೆ.

## 5. ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭಸಹಿತ ಸ್ವಾರಸ್ಯವನ್ನು ಬರೆಯಿರಿ: 2X3=06

23. ಅವರು ಯಾರಿಗೂ ಮೋಸ, ವಂಚನೆ ಮಾಡುವವರಲ್ಲ.

ಈ ವಾಕ್ಯವನ್ನು 'ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳು ಬರೆದಿರುವ 'ಅಸಿ-ಮಸಿ-ಕೃಷಿ ಎಂಬ ಗದ್ಯಭಾಗದಿಂದ ಆರಿಸಲಾಗಿದೆ.

ಈ ವಾಕ್ಯವನ್ನು ಲೇಖಕರು ಕೃಷಿಕರ ಮುಗ್ದತೆಯನ್ನು ಎತ್ತಿ ಹಿಡಿದಿದ್ದಾರೆ. ಕಳಪೆ ಬಿಜ ಸಿಕ್ಕರೂ ಉತ್ತಮವಾದ ಬೆಳೆ ಬೆಳೆಯುತ್ತಾರೆ. ಸರಿಯಾಗಿ ಮಳೆ ಬಾರದಿದ್ದರೂ, ನೀರನ್ನು ಸಂಗ್ರಹಿಸಿ ಭೂಮಿಯನ್ನು ಉಳುಮೆ ಮಾಡುತ್ತಾರೆ. ಆದರೆ ಇವರು ಎಲ್ಲರಿಂದಲೂ ಮೋಸ ಹೋಗುತ್ತಾರೆ. ವಂಚನೆಗೆ ಒಳಗಾಗುತ್ತಾರೆ.

24. "ಎಮ್ಮರಮನೆಯ ನಾರಿಯರೆ ಸಾಕು"

ಈ ವಾಕ್ಯವನ್ನು ನಾರಣಪ್ಪನವರು ಬರೆದಿರುವ ನಿಟ್ಟೋಟದಲ್ಲಿ ಹಾಯ್ದನು ಬಿಟ್ಟಮಂಡೆಯಲ್ಲಿ ಎಂಬ ಪದ್ಯದಿದ ಆರಿಸಿಕೊಳ್ಳಲಾಗಿದೆ.

**6. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು-ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ: 2X4=08**

25. ಗೋಪಾಲನು ತನ್ನ ತಾಯಿಯೊಂದಿಗೆ ನಡೆಸಿದ ಸಂಭಾಷಣೆಯ ಸಾರವೇನು?

ಗೋಪಾಲನನ್ನು ಹೆತ್ತ ತಾಯಿಯು ಕಡುಬಡವಳಾಗಿದ್ದರೂ ಜೀವನ ನಿರ್ವಹಣೆ ಭಾರವನ್ನು ಅವಳು ಹೊತ್ತುಕೊಂಡು ಒಂದು ಸಣ್ಣ ಗುಡಿಸಿಲಲ್ಲಿ ವಾಸವಾಗಿದ್ದಳು ಮಗನನ್ನು ಬಹಳವಾಗಿ ಪ್ರೀತಿಸುತ್ತಿದ್ದ ಅವಳು ಚರಕದಿಂದ ನೂಲು ತೆಗೆದು ಮಗನ ಓದಿಗೆ ಸಂಸಾರದ ಖರ್ಚನ್ನು ಬಹಳ ಕಷ್ಟದಿಂದಲೇ ನಿಭಾಯಿಸುತ್ತಿದ್ದಳು ಮಗನು ಹೊಸ ಪಂಚೆ ಕೇಳಿದಾಗ ಹಗಲಿರುಳೂ ಹಣ ಸಂಪಾದಿಸಿ ಅದನ್ನು ಕೊಡಿಸಿದಳು. ಸಂಜೆಯ ವೇಳೆ ಶಾಲೆಯಿಂದ ಬರುವಾಗ ಕಾಡು ದಾಟುವ ಸಮಯ ಭಯವೆಂದಾಗ ಶ್ರೀಕೃಷ್ಣನನ್ನು ಪ್ರಾರ್ಥಿಸಿದಳು. ದೇವರು (ಗೋಪಾಲ) ನಿನ್ನ ರಕ್ಷಣೆಯನ್ನು ಮಾಡುವೆನೆಂದು ಹೇಳಿ ಅವನ ಎಲ್ಲಾ ಪ್ರಶ್ನೆಗಳಿಗೂ ಉತ್ತರಿಸಿ ಕಳುಹಿಸಿದಳು. ನಿನ್ನ ಅಣ್ಣ ಗೋಪಾಲನು ನಿನ್ನನ್ನು ಕಾಡು ದಾಟಿಸುವ ಎಂದು ಹೇಳಿ ಶಾಲೆಗೆ ಕಳುಹಿಸಿ ಅವನಲ್ಲಿ ಧೈರ್ಯತುಂಬುತ್ತಿದ್ದಳು. ಎಂತ ಕಷ್ಟವಾದ ಸಮಸ್ಯೆಯಲ್ಲಿದ್ದರೂ ಕೃಷ್ಣ ಪರಮಾತ್ಮನಲ್ಲಿ ದೃಢ ವಿಶ್ವಾಸ ಹಾಗೂ ನಿಷ್ಠೆಯುಳ್ಳ ಭಕ್ತಿಯ ಮೆಚ್ಚುಗೆಯ ಪಾತ್ರವಾಗಿದೆ.

ಅಥವಾ

ಬನದ ಗೋಪಾಲನ ಹಾಡಿನ ಸಾರಾಂಶವನ್ನು ಬರೆಯಿರಿ.

ಗೋಪಾಲನು ತಪಸ್ಸನ್ನು ಮಾಡಿದ ಮನುಷ್ಯರ ಒಲುಮೆಗೆ ಸೆರೆಯಾಗುವನು. ತಪಸ್ವಿಗಳು ಯುಗಯುಗಗಳು ತಪಸ್ಸನ್ನು ಮಾಡಿ ಯೋಗಿಗಳಾಗಲು ಸಾಧನೆಯನ್ನು ಮಾಡುವರು. ವಿಶಾಲವಾದ ಕಡಲಿಗಿಂತ ಭಕ್ತರ ಕಣ್ಣೀರು ಅವನ ಇರುವಿಕೆಯ ಸ್ಥಾನವಾಗಿದೆ. ಪರ್ವತದ ಎತ್ತರಕ್ಕಿಂತ ಭಕ್ತರ ಹೃದಯ ಮಂದಿರವನ್ನು ಆತನು ಬಯಸುತ್ತಾನೆ. ಬೃಂದಾವನದಲ್ಲಿ ಗೋಪಿಕೆಯರು ಆಡುವ ಮಾತಿನಲ್ಲಿ ವೇದಗಳಲ್ಲಿ ಇರುವ ಸಾರವು ಸತ್ಯವು ಅಡಗಿದೆ. ಹಾಲನ್ನು ಮಾರುವ ಹೆಣ್ಣುಗಳ ಪ್ರೀತಿಯು ಯೋಗಿಯ ಸಾಧನೆಯನ್ನು ಕೂಡಾ ಮೀರಿದ್ದು ಎಂದು ಗೋಪಾಲನು ಕೊಳಲನ್ನೂದುತ್ತಾ ಹಾಡುತ್ತಾನೆ.

26. ನರನ ಜೀವನದ ಗುರಿ ಯಾವುದಾಗಿರಬೇಕೆಂದು ಅಡಿಗರು ಹೇಳಿದ್ದಾರೆ.

ಮಾನವರು ಕೀಳು ಆಸೆಗಳಲ್ಲಿ ಮುಳುಗಬಾರದು. ಮಾನವನಲ್ಲಿ ದಿನ ನಿತ್ಯದ ದುಡಿಮೆಯ ಫಲವನ್ನು ಪಡೆಯಬೇಕೆಂದು ಮಾನವನ ಜೀವನವು ಹೂವಿನಂತೆ ಅರಳಬೇಕು ಅವನಿಗೆ ಒಂದು ಗುರಿ ಇರಲೇಬೇಕು. ಗುರಿ ಇಲ್ಲದೆ ಬಾಳು ಎಲ್ಲಿಗೆ ಹೋಗಬೆಕೆಂಬ ನಿಶ್ಚಿತತೆ ಇಲ್ಲದ ಅಪಾರವಾದ ಕಡಲಲ್ಲಿ ಚುಕ್ಕಾಣಿ ಇಲ್ಲದ ನೌಕೆಯನ್ನು ನಡೆಸಿದಂತೆ ಎಂದು ತಿಳಿಸಿದ್ದಾರೆ.

ಅಥವಾ

ಗುರಿ ಪದ್ಯದ ಸಾರಾಂಶ ಬರೆಯಿರಿ?

ಬದುಕಿಗೊಂದು ಗುರಿ ಇಲ್ಲದಿದ್ದರೆ ಅದು ಎಲ್ಲಿಗೆ ಹೋಗಬೆಕೆಂಬ ನಿಶ್ಚಿತತೆ ಇಲ್ಲದೆ ಅಪಾರವಾದ ಕಡಲಿನಲ್ಲಿ ಚುಕ್ಕಾಣಿ ಇಲ್ಲದೆ ನೌಕೆಯನ್ನು ನಡೆಸಿದಂತಾಗುತ್ತದೆ. ಜೀವನವು ಸಾರ್ಥಕ ವಾಗಬೇಕಾದರೆ, ನಮ್ಮ ದುಡಿಮೆಗೆ ಫಲವು ಸಿಗಬೇಕಾದರೆ ಒಂದು ನುಯಮವು ಇರಬೇಕು. ಕೆಸರಿನಲ್ಲಿದ್ದರೂ ಕಮಲದ ಹೂ ಸೂರ್ಯನ ಕಿರಣಕ್ಕೆ ಅರಳುವಂತೆ ಕೆಟ್ಟ ಗುಣಗಳನ್ನು ಅಂಟಿಸಿ ಕೊಳ್ಳದೆ ಬಾಳಬೇಕು. ಗಾಳಿ ಬಂದಡೆ ತಿರುವಾಗ ಹೇಡಿತನ ಬೇಡ ಹೆಣ್ತನವು ಬೇಡ, ಪೌರುಷದಿಂದ ಸರಿದಾರಿಯಲ್ಲಿ ಸಾಗಬೇಕು. ಒಂದು ಬಾಣಕ್ಕೆ ಒಂದೇ ಗುರಿ , ಒಂದು ದೇಹದಲ್ಲಿ ಒಂದೇ ಆತ್ಮವಿರುವಂತೆ ಜೀವನದಲ್ಲಿ ಅವುಕಾಶವು ಒಂದೇ ಸಾರಿ ಸಿಗುತ್ತದೆ. ಅದಕ್ಕೆ ಒಂದೇ ಗುರಿಗಾಗಿ ಹೊರಾಡಬೇಕು. ಪರಹಿತಕ್ಕಾಗಿ ಬಾಳಬೇಕು. ನರನಲ್ಲಿ ನಾರಾಯಣನನ್ನು ಕಾಣಬೇಕು. ಸ್ವಾರ್ತವನ್ನು ಮರೆತು ಪರಹಿತಕ್ಕಾಗಿ ದುಡಿಯಬೇಕು ಎಂದು ಕವಿ ತಿಳಿಸಿದ್ದಾರೆ.

**7. ಈ ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ 1X4=04**

"ಸಾಧಕನಾದವನು ಕನಸುಗಳನ್ನು ಕಾಣಬೇಕು. ಆದರೆ ನಿದ್ರೆಯಲ್ಲಿ ಕಾಣುವ ಕನಸುಗಳಲ್ಲ. ನಿದ್ರೆಯನ್ನೇ ತರಿಸದ ಕನಸುಗಳನ್ನು ಕಾಣಬೇಕು" ಎಂದು ರಾಷ್ಟ್ರಪತಿಗಳಾಗಿದ್ದ ಡಾ॥ ಎ.ಪಿ.ಜೆ.ಅಬ್ದುಲ್‌ಕಲಾಂ ಅವರು ಹೇಳಿದ್ದಾರೆ. ದೊಡ್ಡದಾದ ಕನಸು ಕಾಣುವುದು ಅಂತಹ ದೊಡ್ಡ ಸಂಗತಿಯಲ್ಲ. ಆ ಕನಸಿನ ಕುರಿತು ಸಣ್ಣ ಪ್ರಯತ್ನ ಮಾಡುವುದೇ ದೊಡ್ಡ ಸಂಗತಿ. ಮನುಷ್ಯ ಮನಸ್ಸು ಮಾಡಿದರೆ ಯಾವುದೂ ಅಸಾಧ್ಯವಲ್ಲ. ಚಂದ್ರ, ಮಂಗಳನ ಮೇಲೆ ಅಡಿ ಇಟ್ಟಿರುವುದು ಯಾರೋ ಕಂಡ ಕನಸಿನ ಫಲದಿಂದ ಹಾಗೂ ಅದರ ಛಲದಿಂದ ಕನಸನ್ನು ನೆರವೇರಿಸಿಕೊಳ್ಳಲು ಆತ್ಮಸ್ಥೈರ್ಯ ಇರಬೇಕು. ತನ್ನ ಮೇಲೆ ತನಗೆ ನಂಬಿಕೆ ಇರಬೇಕು. ಅಂದುಕೊಂಡದ್ದನ್ನು ಸಾಧಿಸಿಯೇ ತೀರರುತ್ತೇನೆ ಎಂಬ ದೃಢ ಸಮಕಲ್ಪವಿರಬೇಕು. ಸಾಧನೆಯ ಹಾದಿಯಲ್ಲಿ ಸೋಲುಂಡರೆ ಕುಗ್ಗಬಾರದು. ಬದಲಿಗೆ ದೈರ್ಯದಿಂದ ಎದುರಿಸುವ ದೃಢತೆ ಇರಬೇಕು. ಕಾಣುವ ಕನಸು ದೊಡ್ಡದಿದ್ದರೆ ಎದುರಾಗುವ ಸವಾಲುಗಳು ಚಿಕ್ಕದಾಗಿ ಕಾಣುತ್ತವೆ.

ಪ್ರಶ್ನೇಗಳು:–

27. ಡಾ॥ ಎ.ಪಿ.ಜೆ.ಅಬ್ದುಲ್ ಕಲಾಂ ಅವರು ತಿಳಿಸುವಂತೆ ಎಂತಹ ಕನಸನ್ನು ಕಾಣಬೇಕು?
28. ಯಾರೋ ಕಂಡ ಕನಸಿನಿಂದ ಮನುಷ್ಯ ಎಲ್ಲಿಗೆ ಅಡಿಯಿಟ್ಟಿದ್ದಾನೆ?
29. ಕನಸನ್ನು ನನಸು ಮಾಡಲು ಏನಿರಬೇಕು?
30. ಯಾವಗ ಸವಾಲುಗಳು ಚಿಕ್ಕದಾಗಿ ಕಾಣುತ್ತವೆ.

## ಭಾಗ–'ಬಿ'

### (ಅನ್ವಯಿಕ ವ್ಯಾಕರಣ, ಅಲಂಕಾರ ಛಂದಸ್ಸು)

**8. ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ: 12X1=12**

31. ಸರ್ವಾಧಿಕಾರಿ ಪದವು ಈ ಸಮಧಿಗೆ ಉದಾಹರಣೆಯಾಗಿದೆ:
    1)ಲೋಪಸಂಧಿ 2)ಗುಣಸಂಧಿ 3)ಸವರ್ಣದೀರ್ಘಸಂಧಿ 4)ವೃದ್ಧಿಸಂಧಿ
32. "ಮಾನ" ಪದದ ವಿರುದ್ಧಾರ್ಥಕ ಪದ ಇದಾಗಿದೆ:
    1)ಸಂಮಾನ 2)ಅವಮಾಧ 3)ಘನಮಾನ 4)ಅಭಿಮಾಧ
33. "ಸಂಸ್ಕೃತ" ಪದದ ತದ್ಭವ ರೂಪವಿದು:
    1)ಸುಕೃತ 2)ಸಕ್ಕದ 3)ಸುಕ್ಕಾದ 4)ಸುಖದ
34. "ವಿಜ್ಞಾನಿ, ಪಂಡಿತ" ಪದಗಳು ನಾಮಸೂಚಕದ ಈ ಗುಂಪಿಗೆ ಸೇರುತ್ತವೆ:
    1)ರೂಢನಾಮ 2)ಭಾವನಾಮ 3)ಅಂಕಿತನಾಮ 4)ಅನ್ವರ್ಥನಾಮ
35. 'ನೀನು, ನೀವು' ಎಂಬ ಪದಗಳು ಈ ಪುರುಷವಾಚಕ ಸರ್ವನಾಮದ್ದಾಗಿದೆ:
    1)ಉತ್ತಮ ಪುರುಷ 2)ಮಧ್ಯಮ ಪುರುಷ 3)ಪ್ರಥಮ ಪುರುಷ 4)ಅನ್ಯಪುರುಷ
36. 'ಬೆಟ್ಟವನ್ನು' ಪದದಲ್ಲಿ ಬಂದಿರುವ ವಿಭಕ್ತಿಯ ಹೆಸರು:
    1)ಪ್ರಥಮ 2)ದ್ವಿತೀಯ 3)ತೃತೀಯ 4)ಚತುರ್ಥಿ
37. "ಬಾಳೆಯ ಹಣ್ಣಿನಂತೆ ಬಾಗಿದ ಕುಣಿಗಲ್ ಕೆರೆ" ಈ ವಾಕ್ಯದಲ್ಲಿರುವ ಅಲಂಕಾರ:
    1)ಉಪಮಾ 2)ರೂಪಕ 3)ಉತ್ಪ್ರೇಕ್ಷ 4)ಚತುರ್ಥಿ
38. 'ನಗರ' ಪದಕ್ಕೆ ಪ್ರಸ್ತಾರ ಹಾಕಿದಾಗ ಮಾತ್ರೆಗಳ ಸಂಖ್ಯೆ:
    1)ಮೂರು ಮಾತ್ರೆ 2)ನಾಲ್ಕು ಮಾತ್ರೆ 3)ಐದು ಮಾತ್ರೆ 4)ಆರು ಮಾತ್ರೆ
39. 'ನಿಟ್ಟೋಟ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ:
    1)ತತ್ಪುರುಷ ಸಮಾಸ 2)ದ್ವಿಗು ಸಮಾಸ 3)ಕರ್ಮಧಾರೆಯಸಮಾಸ 4)ಗಮಕ ಸಮಾಸ

40.'ಸುವರ್ಣ' ಪದದ ಅರ್ಥ:

1)ಬಂಗಾರ 2)ಬೆಳ್ಳಿ 3)ಕಂಚು 4)ತಾಮ್ರ

41. "ಹೊಚ್ಚಹೊಸದು" ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ:

1)ದ್ವಿರುಕ್ತಿ 2)ಜೋಡಿಪದ 3)ಅನುಕರಣ 4)ಕೃದಂತ

42.ಬನದಲ್ಲಿ ಏನಮ್ಮ ಸೊಗಸು! ಈ ವಾಕ್ಯದಲ್ಲಿ ಬಂದಿರುವ ಲೇಖನ ಚಿಹ್ನೆ:

1)ಭಾವಸೂಚಕ 2)ಪ್ರಶ್ನಾರ್ಥಕ 3)ವಾಕ್ಯವೇಷ್ಟನ 4)ಅರ್ಧವಿರಾಮ

## ಭಾಗ–'ಸಿ'

## (ವಾಕ್ಯ ರಚನೆ ಹಾಗೂ ಬರವಣಿಗೆ ಕೌಶಲ್ಯ)

**9. ಈ ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಕೊಂಡು ವಿಸ್ತರಿಸಿ ಬರೆಯಿರಿ** **1X3=03**

43.ದೇಶ ಸುತ್ತಿ ನೋಡು; ಕೋಶ ಓದಿ ನೋಡು.

ಅಥವಾ

ಹಕ್ಕಿಗಳಿಗೆ ಗೂಡು; ಮಕ್ಕಳಿಗೆ ತಾಯಿ

ಅಥವಾ

ಮಾತು ಬೆಳ್ಳಿ ಮೌನ ಬಂಗಾರ

**10.ಯಾವುದಾದರು ಒಂದು ಪತ್ರವನ್ನು ಬರೆಯಿರಿ** **1X4=04**

44.ನೀವು ಹಾಸನ ಜಿಲ್ಲೆ ರಾಮನಾಥಪುರದಲ್ಲಿ ವಾಸವಾಗಿರುವ ರಚನಾ ಎಂದು ಭಾವಿಸಿಕೊಂಡು ನಿಮ್ಮ ಊರಿನ ಬೀದಿ ದೀಪಗಳನ್ನು ಸರಿಪಡಿಸುವಂತೆ ಕೋರಿ, ಗ್ರಾಮ ಪಂಚಾಯಿತಿಯ ಅಧ್ಯಕ್ಷರಿಗೆ ಒಂದು ಮನವಿ ಪತ್ರ ಬರೆಯಿರಿ.

ಅಥವಾ

ನೀವು ಮೈಸೂರಿನ ಸರ್ಕಾರಿ ಪ್ರೌಢ ಶಾಲೆಯಲ್ಲಿ ಓದುತ್ತಿರುವ ಸಲ್ಮಾ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯ ವಾರ್ಷಿಕೋತ್ರಸವ ಸಮಾರಂಭಕ್ಕೆ ಬರುವಂತೆ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದಲ್ಲಿ ಇರುವ ನಿಮ್ಮ ಗೆಳತಿ ರೇಷ್ಮಾ ಗೆ ಒಂದು ಪತ್ರ ಬರೆಯಿರಿ.

**11.ಈ ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ** **1X4=04**

45.ಜಲ ಮಾಲಿನ್ಯಕ್ಕೆ ಕಾರಣಗಳು ಮತ್ತು ಪರಿಹಾರಗಳು

- ವಿದ್ಯಾಥಿಗಳಲ್ಲಿ ಶಿಸ್ತು
- ಸ್ವಚ್ಚತಾ ಅಭಿಯಾನದಲ್ಲಿ ವಿದ್ಯಾರ್ಥಿಗಳ ಪತ್ರ

# ಆ್ಯಂಗ್ಲೋ ಉರ್ದು ಬಾಲಕರ ಪ್ರೌಢ ಶಾಲೆ ಗದಗ

## ಪೂರ್ವ ಸಿದ್ಧತಾ ಪರೀಕ್ಷೆ – 01

ವರ್ಗ :10ನೇ ತರಗತಿ **2018–19** ವಿಷಯ: ದ್ವಿತೀಯ ಭಾಷೆ ಕನ್ನಡ

ಸಮಯ :02:30 ನಿಮಿಷ ಗರಿಷ್ಠ ಅಂಕಗಳು:80

---

**ಪ್ರಶ್ನೆ ಪತ್ರಿಕೆಯು 'ಎ', 'ಬಿ' ಮತ್ತು 'ಸಿ' ಎಂಬ 3 ಬಾಗ ಒಳಗೊಂಡಿದೆ.**

- ಭಾಗ– 'ಎ' ಪಠ್ಯಗಳ ಅಧ್ಯಯನ (ಗದ್ಯ, ಪದ್ಯ, ಪೋಷಕ ಅಧ್ಯಯನ)53
- ಭಾಗ– 'ಬಿ' ಅನ್ವಯಿಕ ವ್ಯಾಕರಣ – 12 ಅಂಕಗಳು
- ಭಾಗ– 'ಸಿ' ವಾಕ್ಯ ರಚನೆ ಹಾಗೂ ಬರವಣಿಗೆ ಕೌಶಲ್ಯ – 15 ಅಂಕಗಳು

**ಭಾಗ–'ಎ'**

1. **ಕೆಳಗಿನ ಪ್ರಶ್ನೆಗಳಿಗೆ ಒಂದೋಂದು ವ್ಯಾಕ್ಯಗಳಲ್ಲಿ ಉತ್ತರಿಸಿ** **8X1=08**
2. ಲಲಲ
3. **ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **11X2=22**
4. **ಈ ಕೆಳಗಿನ ಪಧ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **1X3=03**
5. ನೀರು ಕಂಡಲ್ಲಿ . . . . . . . . . . . . . . . . .

. . . . . . . . . . . . . . . . . . . . . . . . . . .
. . . . . . . . . . . . . . . . . . . . . . . . . . .
. . . . . . . . . . . . . . . . .ಕೂಡಲಸಂಗಮದೇವ

ಅಥವಾ

ಮರವಿದ್ದು . . . . . . . . . . . . . . . . . . . .
. . . . . . . . . . . . . . . . . . . . . . . . . . .
. . . . . . . . . . . . . . . . . . . . . . . . . . .
. . . . . . .ಜ್ಞಾನವಿಲ್ಲದನ್ನಕ್ಕ ಚೆನ್ನಮಲ್ಲಿಕಾರ್ಜುನ

6. **ಈ ಕೆಳಗಿನ ಕವಿಗಳ/ಸಾಹಿತಿಗಳ ಜನ್ಮಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ಬರೆಯಿರಿ.** **2X3=06**

7. **ಈ ಕೆಳಗಿನ ಹೇಳಿಕೆಗಳಿಗೆ ಸಂದರ್ಭಸಹಿತ ಸ್ವಾರಸ್ಯವನ್ನು ಬರೆಯಿರಿ:**
**2X3=06**

8. **ಈ ಕೆಳಗಿನ ಪ್ರಶ್ನೆಗಳಿಗೆ ಎಂಟು–ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ:** **2X4=08**

9. **ಈ ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ** **1X4=04**

**ಭಾಗ–'ಬಿ'**

**(ಅನ್ವಯಿಕ ವ್ಯಾಕರಣ, ಅಲಂಕಾರ ಛಂದಸ್ಸು)**

**10.** **ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ:** **12X1=12**

## ಭಾಗ–'ಸಿ'

## (ವಾಕ್ಯ ರಚನೆ ಹಾಗೂ ಬರವಣಿಗೆ ಕೌಶಲ್ಯ)

**11.** **ಈ ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಕೊಂಡು ವಿಸ್ತರಿಸಿ ಬರೆಯಿರಿ** **1X3=03**

**12.** ದೇಶ ಸುತ್ತಿ ನೋಡು; ಕೋಶ ಓದಿ ನೋಡು.

ಅಥವಾ

ಹಕ್ಕಿಗಳಿಗೆ ಗೂಡು; ಮಕ್ಕಳಿಗೆ ತಾಯಿ

ಅಥವಾ

ಮಾತು ಬೆಳ್ಳಿ ಮೌನ ಬಂಗಾರ

**13.** **ಯಾವುದಾದರು ಒಂದು ಪತ್ರವನ್ನು ಬರೆಯಿರಿ** **1X4=04**

**14.** ನೀವು ಹಾಸನ ಜಿಲ್ಲೆ ರಾಮನಾಥಪುರದಲ್ಲಿ ವಾಸವಾಗಿರುವ ರಚನಾ ಎಂದು ಭಾವಿಸಿಕೊಂಡು ನಿಮ್ಮ ಊರಿನ ಬೀದಿ ದೀಪಗಳನ್ನು ಸರಿಪಡಿಸುವಂತೆ ಕೋರಿ, ಗ್ರಾಮ ಪಂಚಾಯಿತಿಯ ಅಧ್ಯಕ್ಷರಿಗೆ ಒಂದು ಮನವಿ ಪತ್ರ ಬರೆಯಿರಿ.

ಅಥವಾ

ನೀವು ಮೈಸೂರಿನ ಸರ್ಕಾರಿ ಪ್ರೌಢ ಶಾಲೆಯಲ್ಲಿ ಓದುತ್ತಿರುವ ಸಲ್ಮಾ ಎಂದು ಭಾವಿಸಿಕೊಂಡು ನಿಮ್ಮ ಶಾಲೆಯ ವಾರ್ಷಿಕೋತ್ರಸವ ಸಮಾರಂಭಕ್ಕೆ ಬರುವಂತೆ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದಲ್ಲಿ ಇರುವ ನಿಮ್ಮ ಗೆಳತಿ ರೇಷ್ಮಾ ಗೆ ಒಂದು ಪತ್ರ ಬರೆಯಿರಿ.

**15.** **ಈ ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ** **1X4=04**

**16.** ಜಲ ಮಾಲಿನ್ಯಕ್ಕೆ ಕಾರಣಗಳು ಮತ್ತು ಪರಿಹಾರಗಳು

- ವಿದ್ಯಾಥಿಗಳಲ್ಲಿ ಶಿಸ್ತು
- ಸ್ವಚ್ಚತಾ ಅಭಿಯಾನದಲ್ಲಿ ವಿದ್ಯಾರ್ಥಿಗಳ ಪತ್ರ